# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.462-2016** **ಪಿ . ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಜ್ಯೋತಿ.ಸಿ<br>ನಂಜನಗೂಡು |
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 02-02-2024.** |

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಎನ್.ಎಸ್ ವಕೀಲರಿಂದಃ**

4.ನನ್ನ ತಾಯಿಯವರು ಜೀವಂತ ಇರುತ್ತಾರೆ ಎಂದರೆ ಸರಿ. ಅವರ ಹೆಸರು ಪಾರ್ವತಮ್ಮ. ನಾನು ನನ್ನ ತಾಯಿಯವರನ್ನು ಈ ದಾವೆಯ ಪಕ್ಷಕಾರರನ್ನಾಗಿ ಮಾಡಿರುವುದಿಲ್ಲ. ನನ್ನ ತಂದೆಯವರು ಎಸ್.ಐ.ಪಿ.ಎಂ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ನನ್ನ ತಂದೆಯವರು ಮರಣಹೊಂದಿ ಸುಮಾರು 30 ವರ್ಷಗಳಾಗಿರುತ್ತವೆ. ನನ್ನ ತಂದೆಯವರು ಮರಣಹೊಂದಿದ ನಂತರ ನನ್ನ ಅಜ್ಜಿ ಮತ್ತು ಅವರ ಮಕ್ಕಳು ನನ್ನ ತಂದೆಗೆ ಕಂಪನಿಯಿಂದ ಬರಬೇಕಾದ ಹಣ ಮತ್ತು ಒಟ್ಟುಕುಟುಂಬದ ಆಸ್ತಿಗಳನ್ನು ತೆಗೆದುಕೊಳ್ಳುತ್ತಾರೆ ಎಂಬ ಉದ್ದೇಶದಿಂದ ಅವರುಗಳ ವಿರುದ್ಧ ಓ.ಎಸ್.ನಂ.39/1995 ರಂತೆ ದಾವಾವನ್ನು ಸಲ್ಲಿಸಿದ್ದರು ಎಂದರೆ ಸರಿಯಲ್ಲ. ನನ್ನ ತಾಯಿಯವರು ಸಲ್ಲಿಸಿದ ದಾವೆಯಲ್ಲಿ, ಈ ದಾವೆಯ ಷೆಡ್ಯೂಲ್ ಸ್ವತ್ತುಗಳನ್ನು ಸಹ ಸೇರಿಸಲಾಗಿರುತ್ತು ಎಂದರೆ ಸರಿಯಲ್ಲ.

5. ನನ್ನ ತಾಯಿಯವರು ಸಲ್ಲಿಸಿದ್ದ ಓ.ಎಸ್.ನಂ.39/1995 ರ ದಾವೆಯನ್ನು ನನ್ನ ತಾಯಿಯವರು ನಮ್ಮಗಳ ಪರವಾಗಿಯೂ ಸಹ ರಾಜಿ ಮಾಡಿಕೊಂಡಿದ್ದು ಒಟ್ಟು ಕುಟುಂಬದಿಂದ ಬರಬೇಕಾದ ಆಸ್ತಿಗಳ ಬಾಬ್ತು ಹಣವನ್ನು ಪಡೆದುಕೊಂಡಿದ್ದರಿಂದ ಸದರಿ ದಾವೆಯೂ ಮುಕ್ತಾಯವಾಗಿರುತ್ತದೆ ಎಂದರೆ ಸರಿಯಲ್ಲ. ಇದರಿಂದಾಗಿ 1996 ರ ನಂತರ ಒಟ್ಟು ಕುಟುಂಬದ ಸ್ವತ್ತುಗಳಿಗೆ ಸಂಬಂಧಿಸಿದಂತೆ ನಮಗಾಗಲಿ, ನಮ್ಮ ತಾಯಿಯವರಿಗಾಗಲಿ ಯಾವುದೇ ಹಕ್ಕು

ಇರುವುದಿಲ್ಲ ಎಂದರೆ ಸರಿಯಲ್ಲ. ಆಗಾಗಿ 2 ನೇ ಭಾರಿಗೆ ಭಾಗಾಂಶವನ್ನು ಕೋರಿ ನಾವುಗಳು ಸಲ್ಲಿಸಿರುವ ಈ ದಾವೆಯೂ ಊರ್ಜಿತವಾಗತಕ್ಕದ್ದಲ್ಲ ಎಂದರೆ ಸರಿಯಲ್ಲ.

6. 2 ನೇ ಪ್ರತಿವಾದಿ ರವಿ ರವರು ಎಸ್.ಐ.ಪಿ.ಎಂ ಕಾರ್ಖಾನೆಯಲ್ಲಿ ನನ್ನ ತಂದೆಯವರು ಮಾಡುತ್ತಿದ್ದ ಕೆಲಸವನ್ನು ಮಾಡುತ್ತಿರುತ್ತಾರೆ. 2 ನೇ ಪ್ರತಿವಾದಿಯವರು ಅಂಗವಿಕಲರು ಎಂದರೆ ಸರಿ. 2 ನೇ ಪ್ರತಿವಾದಿಯವರು ಕೆಲಸಕ್ಕೆ ಸೇರಿದ ನಂತರ ಅವರಿಗೆ ಬಂದ ಆದಾಯದಿಂದ ದಾವಾ 2 ನೇ ಐಟಂ ಸ್ವತ್ತಿನಲ್ಲಿ ಕಲ್ನಾರ್ ಶೀಟಿನ ಮನೆಯನ್ನು ನಿರ್ಮಿಸಿರುತ್ತಾರೆ ಎಂದರೆ ಸರಿ. ನಾವು ಈ ದಾವೆಯನ್ನು ಸಲ್ಲಿಸಿದ ನಂತರ ಆರ್ಜಿಯನ್ನು ಸಲ್ಲಿಸಿ 3 ನೇ ಐಟಂ ಸ್ವತ್ತನ್ನು ದಾವಾದಲ್ಲಿ ಸೇರಿಸಿರುತ್ತೇವೆ ಎಂದರೆ ಸರಿ. ದಾವಾ 3 ನೇ ಐಟಂ ಸ್ವತ್ತು ಯಾವ ರೀತಿ ಬಂತು ತೋರಿಸಲು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ದಾವಾ 3 ನೇ ಐಟಂ ಸ್ವತ್ತು ದೊಡ್ಡಬೀರ ಉರುಫ್ ಕೊಂತ ರವರ 2 ನೇ ಮಗ ಮಾದಪ್ಪ ಉ ಮಹದೇವ ರವರು ಕ್ರಯಕ್ಕೆ ಪಡೆದಿರವ ಸ್ವತ್ತು ಎಂದರೆ ನನಗೆ ಗೊತ್ತಿಲ್ಲ ಹಾಗಾಗಿ ಈ ದಾವಾಗೂ ದಾವಾ 3 ನೇ ಐಟಂ ಸ್ವತ್ತಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ 3 ನೇ ಐಟಂ ಸ್ವತ್ತಿನ ಮೂಲ ಮಾಲೀಕರ ವಾರಸುದಾರರನ್ನು ಈ ದಾವೆಯ ಪಕ್ಷಕಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ.

7. ನನ್ನ ಮದುವೆಯಾದ ನಂತರ ನನ್ನ ಹೆಸರು ಆಧಾರ್ ಕಾರ್ಡ್ ಮತ್ತು ಮತದಾರರ ಗುರುತಿನ ಚೀಟಿಯಲ್ಲಿ ಜ್ಯೋತಿ ಎಂದೇ ಇರುತ್ತದೆ. ನಾನು ಮುಸ್ಲಿಂ ಯುವಕನನ್ನು ಮದುವೆಯಾಗಿ ಮುಸ್ಲಿಂ ಧರ್ಮಕ್ಕೆ ಮತಾಂತರ ಹೊಂದಿರುವುದರಿಂದ ನನಗೂ ಮತ್ತು ಹಿಂದೂ ಅವಿಭಕ್ತ ಕುಟುಂಬಕ್ಕೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಮುಸ್ಲಿಂ ಸಮುದಾಯದವರನ್ನು ಮದುವೆಯಾಗಿದ್ದರೂ ಮುಸ್ಲಿಂ ಧರ್ಮಕ್ಕೆ ಮತಾಂತರ ಹೊಂದಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಮುಸ್ಲಿಂ ಧರ್ಮಕ್ಕೆ ಮತಾಂತರಗೊಂಡು ಮುಸ್ಲಿಂ ಧರ್ಮದ ಆಚಾರ–ವಿಚಾರಗಳನ್ನು ಪಾಲನೆ ಮಾಡುತ್ತಿದ್ದರು ಅದನ್ನು ಮರೆಮಾಚಿ ಪ್ರತಿವಾದಿಗಳಿಗೆ ಸೇರಿದ ಸ್ವತ್ತನ್ನು ಕಬಳಿಸಬೇಕೆಂಬ ಉದ್ದೇಶದಿಂದ ಈ ದಾವಾವನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಾಯಿಯವರು ಈಗಾಗಲೇ ನಮ್ಮ ಪರವಾಗಿಯೂ ನನ್ನ

ತಂದೆಯವರ ಭಾಗಕ್ಕೆ ಬಂದಂತಹ ಸ್ವತ್ತುಗಳ ಬಾಬ್ತು ಹಣವನ್ನು ಪಡೆದುಕೊಂಡಿದ್ದರು ಸಹ ಅದನ್ನು ಮರೆಮಾಚಿ ಈ ದಾವಾವನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ನನ್ನ ತಾಯಿಯವರನ್ನು ನ್ಯಾಯಾಲಯಕ್ಕೆ ಕರೆತಂದು ವಿಚಾರಣೆ ಮಾಡಿಸಲು ತೊಂದರೆ ಇರುವುದಿಲ್ಲ.

**ಮರು ವಿಚಾರಣೆ ಇಲ್ಲ.**

(**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು**)

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**